ಓ.ಎಸ್. ನಂಃ 92/2022
ಡಿ.ಡಬ್ಲ್ಯೂ-1 (ನಾಗರಾಜ)

ದಿನಾಂಕ: 14-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಬಿ.ಎಚ್.ಎನ್. ವಾದಿ ಪರ ವಕೀಲರಿಂದಃ</u>**

ನಾನು ಐ.ಟಿ.ಐ ಓದಿದ್ದೇನೆ. ನಾನು 1999-2000 ರಲ್ಲಿ ಐ.ಟಿ.ಐ ಮುಗಿಸಿರುತ್ತೇನೆ. 2003ರಲ್ಲಿ ನಾನು ಉಗಾರ ಶುಗರ್ ಫ್ಯಾಕ್ಟರಿಯಲ್ಲಿ ಟ್ರೇನಿ ಎಂದು ಕೆಲಸಕ್ಕೆ ಸೇರಿದ್ದೇನೆ. ನಾನು 2003ರಲ್ಲಿ ಕೆಲಸಕ್ಕೆ ಸೇರಿದಾಗ ಉಗಾರ ಶುಗರ್ ಫ್ಯಾಕ್ಟರಿಯ ಕ್ವಾಟರ್ಸ್‌ನಲ್ಲಿ ಇರುತ್ತಿದ್ದೆ. ಆಗ ನನಗೆ ತಿಂಗಳಿಗೆ ರೂ.5,000/- ಸಂಬಳ ಇತ್ತು, ಎಲ್ಲ ಕಟಾವುಗಳಾಗಿ ನನ್ನ ಕೈಗೆ ರೂ.4,000/- ದಿಂದ ರೂ.4,500/- ಬರುತ್ತಿತ್ತು.

2. ನನ್ನ ಮದುವೆ 2012ರಲ್ಲಿ ಆಗಿರುತ್ತದೆ. ನನ್ನ ಮದುವೆಗೆ ರೂ.4,00,000/- ದಿಂದ ರೂ.5,00,000/- ಖರ್ಚು ಆಗಿದೆ ಎಂದರೆ ಸರಿಯಲ್ಲ, ಆದರೆ ರೂ.1,50,000/- ಖರ್ಚಾಗಿರುತ್ತದೆ. ಉಗಾರ ಶುಗರ್ ಫ್ಯಾಕ್ಟರಿಯಲ್ಲಿ ನಾನು 2003 ರಿಂದ 2009 ರವರೆಗೆ ಕೆಲಸ ಮಾಡಿದ್ದೇನೆ. 2010ರಲ್ಲಿ ಹುಣಶ್ಯಾಳದ ಸತೀಶ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿದ್ದೇನೆ. ಆಗ ನನಗೆ ಪ್ರತಿ ತಿಂಗಳ ಸಂಬಳ ರೂ.8,500/- ದಿಂದ ರೂ.10,500/- ಬರುತ್ತಿತ್ತು.

3. ನನ್ನ ಮಗಳು ಈಗ 3ನೇ ತರಗತಿಯಲ್ಲಿ ಓದುತ್ತಿದ್ದಾಳೆ, ನನ್ನ ಮಗನಿಗೆ ಈಗ 03 ವರ್ಷ ವಯಸ್ಸು ಇರುತ್ತದೆ. ನನ್ನ ಹೆಂಡತಿಯ ಹೆರಿಗೆಗೆ ಮತ್ತು ನನ್ನ ಮಗಳ ವಿದ್ಯಾಭ್ಯಾಸಕ್ಕೆ ಇಲ್ಲೀಯವರೆಗು ಸುಮಾರು ರೂ.5,00,000/- ದಿಂದ

ರೂ.6,00,000/- ಖರ್ಚು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಕುಟುಂಬ ನಿರ್ವಹಣೆಗೆ ಪ್ರತಿ ತಿಂಗಳ ನನಗೆ ರೂ.30,000/- ದಿಂದ ರೂ.40,000/- ಖರ್ಚು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ರೂ.6,000/- ರಿಂದ ರೂ.7,000/- ದಷ್ಟು ಪ್ರತಿ ತಿಂಗಳ ಖರ್ಚು ಬರುತ್ತದೆ ಎಂದು ಹೇಳುತ್ತಾರೆ. ನನ್ನ ಮಗಳನ್ನು ಖಾಸಗಿ ಶಾಲೆಯಲ್ಲಿ ಓದಿಸುತ್ತಿದ್ದೇನೆ. ನನ್ನ ಮಗಳ ಶಾಲೆಯ ಫೀಸ್ ವರ್ಷಕ್ಕೆ ರೂ.9,000/- ಇದೆ. ನನ್ನ ಮಗಳ ಶಾಲೆಯ ಫೀಸನ್ನು ಬಿಟ್ಟು ಅವಳ ಶಾಲೆಯ ಇತರ ಖರ್ಚಿಗೆ ಅಂದಾಜು ರೂ.4,000/- ರಿಂದ ರೂ.5,000/- ಖರ್ಚು ಬರುತ್ತದೆ. ನನ್ನ ಕುಟುಂಬ ನಿರ್ವಹಣೆಗೆ ನನಗೆ ತಿಂಗಳಿಗೆ ರೂ.7,000/- ರಿಂದ ರೂ.8,000/- ದಷ್ಟು ಖರ್ಚು ಬರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಮೂಲ ಪುರುಷ ತುಳಜಪ್ಪ ಇವರಿಗೆ ಭಾಗವ್ವ, ದುಂಡವ್ವ, ಬಾಳಪ್ಪ ಎಂದು 03 ಜನ ಮಕ್ಕಳು ಎಂದರೆ ಸರಿ. ಭಾಗವ್ವ ಮತ್ತು ದುಂಡವ್ವ ತಮ್ಮ ತಮ್ಮ ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ಭಾಗವ್ವ ಮತ್ತು ದುಂಡವ್ವ ತಮ್ಮ ಗಂಡನ ಮನೆಯಲ್ಲಿ ಒಳ್ಳೇಯ ರೀತಿಯಿಂದ ಇದ್ದಾರೆ ಎಂದರೆ ಸರಿ. ಸದರಿಯವರು ಇಲ್ಲೀಯವರೆಗು ದಾವಾ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಮಾಡಿಲ್ಲ ಎಂದರೆ ಸಾಕ್ಷಿದಾರರು ಈಗ ಈ ದಾವೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಈ ದಾವೆಯನ್ನು ಹೊರತುಪಡಿಸಿ ಬೇರೆ ದಾವೆ ಮಾಡಿಲ್ಲ. ಸದರಿ ಭಾಗವ್ವ ಮತ್ತು ದುಂಡವ್ವ ಅವರ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳಿಲ್ಲ ಎಂದರೆ ಸರಿ.

5. ತುಳಜಪ್ಪ ಇವರ ಮಗ ಬಾಳಪ್ಪ ಇವರಿಗೆ ಮೊದಲನೆ ಹೆಂಡತಿ ಮಹಾದೇವಿ ಎಂದರೆ ಸರಿ. ಸದರಿ ಬಾಳಪ್ಪ ಮತ್ತು ಮಹಾದೇವಿ ಇವರಿಗೆ ವಾದಿ ಮತ್ತು ಪ್ರತಿವಾದಿ 4 ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.116 ಮತ್ತು 136 ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಬಾಳಪ್ಪ ಇವರು ಬೇರೆ ಹೆಣ್ಣು ಮಗಳ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಅವರ ಹೆಂಡತಿ ಮಹಾದೇವಿ ಇವರಿಗೆ ಹೊಡಿಬಡಿ ಮಾಡಿ ಅವರ ತವರು ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

6. ಬಾಳಪ್ಪ ಇವರ ಮೊದಲನೆ ಹೆಂಡತಿ ಮಹಾದೇವಿ ಇವರ ಜೀವಿತ ಕಾಲದಲ್ಲಿಯೆ ಸದರಿ ಬಾಳಪ್ಪ ಇವರು ಕಾನೂನು ಬಾಹೀರವಾಗಿ ಉದ್ದವ್ವ ಇವರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಬಾಳಪ್ಪ ಇವರ ಮೊದಲನೆ ಹೆಂಡತಿ ಮಹಾದೇವಿ ಇವರ ಮರಣಾ ನಂತರ ಬಾಳಪ್ಪ ಇವರು ಉದ್ದವ್ವ ಇವರನ್ನು ಮದುವೆಯಾಗಿದ್ದಾರೆ ಎಂದು ಹೇಳುತ್ತಾರೆ. ಮಹಾದೇವಿ ಇವರು ಮೃತಪಟ್ಟ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಬಾಳಪ್ಪ ಮತ್ತು ಉದ್ದವ್ವ ಇವರ ಮದುವೆಯಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಬಾಳಪ್ಪ ಇವರು ತಮ್ಮ ಜೀವಿತ ಕಾಲದಲ್ಲಿ ಯಾವತ್ತೂ ಉದ್ದವ್ವ ಇವರನ್ನು ಕಾನೂನುಬದ್ಧವಾಗಿ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಬಾಳಪ್ಪ ಮತ್ತು ಉದ್ದವ್ವ ಇವರ ಮದುವೆ ಯಾದಿ ಅಥವ ಮದುವೆ ಆಮಂತ್ರಣಾ ಪತ್ರಿಕೆಯನ್ನು ನಾನು ಹಾಜರ ಮಾಡಿಲ್ಲ.

7. ಹುಣಶ್ಯಾಳ ಪಿ.ಜಿ. ಗ್ರಾಮದ ಮನೆ ಆಸ್ತಿ ಜಿ.ಪಿ.ಸಿ ನಂ.1443 ನ್ನು ರೂ.9,000/- ಕ್ಕೆ 2009 ರಲ್ಲಿ ನಾನು ಖರೀದಿ ಮಾಡಿದ್ದೇನೆ. ಸದರಿ ಮನೆಯ ಖರೀದಿ ಪತ್ರ ಹಾಜರ ಮಾಡಿಲ್ಲ ಆದರೆ ಆ ಮನೆ ಹಕ್ಕು ಬಿಟ್ಟು ಕೊಟ್ಟ ಪತ್ರದ ಅಡಿ ನನಗೆ ಬಂದಿರುತ್ತದೆ. ಸದರಿ ಮನೆಯನ್ನು ನನಗೆ ಮಹಾದೇವಿ ಇವರು ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನಾನು ಹಾಜರ ಮಾಡಿರುತ್ತೇನೆ. ಸದರಿ ಮನೆಯ ವಿಸ್ತೀರ್ಣ 19ಅಡಿ x 33ಅಡಿ ಇದೆ. ಸಾಕ್ಷಿದಾರರಿಗೆ ಜಿ.ಪಿ.ಸಿ ನಂ.1443 ರಲ್ಲಿ ಮನೆ ಕಟ್ಟಲು ಎಷ್ಟು ಖರ್ಚು ಆಗಿದೆ ಎಂದು ಪ್ರಶ್ನಿಸಿದರೆ ತಾವು ಖುಲ್ಲಾ ಜಾಗಾ ತೆಗೆದುಕೊಂಡು ರೂ.6,00,000/- ದಿಂದ ರೂ.7,00,000/- ಖರ್ಚು ಮಾಡಿ ಮನೆ ಕಟ್ಟಿದ್ದಾಗಿ ಹೇಳುತ್ತಾರೆ. ನಾನು ನನ್ನ ಸಂಬಳದಿಂದ ಉಳಿಸಿದ ಹಣದಲ್ಲಿ ಮನೆ ಕಟ್ಟಿರುತ್ತೇನೆ. ನನ್ನ ಸಂಬಳ ನನ್ನ ಉಳಿತಾಯ ಖಾತೆಗೆ ಜಮಾ ಆಗುತ್ತದೆ.

8. ನಾನು ನನ್ನ ಸಂಬಳದಲ್ಲಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಉಳಿಸಿದ್ದೆ ಎಂದು ಹೇಳಲು ಬರುವುದಿಲ್ಲ. ನಾನು ಹಾಜರಪಡಿಸಿದ ನನ್ನ ಬ್ಯಾಂಕ ಖಾತೆಯ ಸ್ಟೇಟ್ಮೆಂಟ ನಿಡಿ-18ರ ಪ್ರಕಾರ ದಿಃ 31/07/2014 ರಂದು ನನ್ನ ಖಾತೆಯಲ್ಲಿ ರೂ.230/- ಇತ್ತು ಎಂದರೆ ಸರಿ. ಜಿ.ಪಿ.ಸಿ ನಂ.1443 ರಲ್ಲಿ ಮನೆ ಕಟ್ಟಿಸಲು ನನ್ನ ಬಳಿ ಸಂಬಳದಿಂದ ಉಳಿಸಿದ ದುಡ್ಡು ಇರಲಿಲ್ಲ ಎಂದರೆ ಸರಿಯಲ್ಲ. ಜಿ.ಪಿ.ಸಿ ನಂ.1443 ರಲ್ಲಿ ನಾನು ನನ್ನ ಸ್ವಂತ ದುಡಿಮೆಯಿಂದ ಮನೆ ಕಟ್ಟಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಜಿ.ಪಿ.ಸಿ.ನಂ.1443 ರಲ್ಲಿ ಮನೆ ಕಟ್ಟಲು ನನ್ನ ಸಂಬಳದ ಮೊತ್ತ ಸಾಕಾಗುವುದಿಲ್ಲ, ಅಲ್ಲಿ ಮನೆ ಕಟ್ಟಬೇಕಾದಲ್ಲಿ ಹಿರಿಯರ ಆಸ್ತಿಯಿಂದ ಬಂದ ಉತ್ಪನ್ನವನ್ನು ಸಹ ಉಪಯೋಗಿಸಬೇಕು ಎಂದರೆ ಸರಿಯಲ್ಲ. ನಮಗೆ ದಾವಾ ಜಮೀನುಗಳ ಉತ್ಪನ್ನವನ್ನು ಹೊರತುಪಡಿಸಿ ಬೇರೆ ಯಾವುದೇ ಉತ್ಪನ್ನ ಇರುವುದಿಲ್ಲ ಎಂದರೆ ಸರಿಯಲ್ಲ.

10. ಬಾಳಪ್ಪ ಇವರು 1983-84 ರಲ್ಲಿ ದಾವಾ ಜಮೀನುಗಳನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ, ಆಗ ನಾನು ಅಂದಾಜು 01 ವರ್ಷದವನಿದ್ದೆ. ಬಾಳಪ್ಪ ಇವರಿಗೆ ದಾವಾ ಜಮೀನುಗಳನ್ನು ನನಗೆ ಬಿಟ್ಟು ಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಬಾಳಪ್ಪ ಇವರಿಗೆ ಕುಡಿತದ ಚಟ ಇದ್ದು ಅದರ ದುರುಪಯೋಗ ಪಡೆದುಕೊಂಡು ಬಾಳಪ್ಪ ಇವರ ಹೆಸರಿನಲ್ಲಿ ಇದ್ದ ದಾವಾ ಜಮೀನುಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಳಪ್ಪ ಇವರು ದಾವಾ ಜಮೀನುಗಳು ನನ್ನ ಹೆಸರಿಗೆ ಇರಲಿ ಎಂದು ವರದಿ ಸಲ್ಲಿಸುವ ಮುಖಾಂತರ ನನಗೆ ಬಿಟ್ಟು ಕೊಟ್ಟಿರುತ್ತಾರೆ. ದಾವಾ ಜಮೀನುಗಳನ್ನು ನನಗೆ ಬಿಟ್ಟು ಕೊಟ್ಟ ಬಗ್ಗೆ ನೋಂದಣಿಯಾದ ಯಾವುದೇ ದಾಖಲೆಗಳು ಇರುವುದಿಲ್ಲ.

11. ವಾದಿ ದಾವಾ ಆಸ್ತಿಗಳಲ್ಲಿ ದುಡಿಯುತ್ತಾರೆ ಮತ್ತು ದಾವಾ ಆಸ್ತಿಗಳಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿ ತಾವು ದುಡಿದ

ದುಡ್ಡಿನಲ್ಲಿ ದಾವಾ ಆಸ್ತಿಯ ತೆರಿಗೆ ಕಟ್ಟಲು ನನಗೆ ದುಡ್ಡು ಕೊಡುತ್ತಾರೆ ಎಂದರೆ ಸರಿಯಲ್ಲ. ನಾನಾಗಲಿ ಅಥವಾ ಉದ್ದವ್ವ ಆಗಲಿ ಬಾಳಪ್ಪ ಇವರಿಗೆ ಯಾವ ರೀತಿಯಿಂದಲೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಪ್ರತಿವಾದಿ ಕೂಡಿಕೊಂಡು ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡಬಾರದೆಂದು ಹೇಳಿ ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಳಪ್ಪ ಇವರು ಯಾವತ್ತೂ ದಾವಾ ಆಸ್ತಿಗಳನ್ನು ನನಗೆ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ